## ಸರ್ಕಾರಿ ಪ್ರೌಢ ಶಾಲೆ ಬೇಗೂರು ಬೆಂಗಳೂರು-೬೮

## ಎರಡನೇ ಸಂಕಲನಾತ್ಮಕ ಮೌಲ್ಯಮಾಪನ ೨೦೧೫-೧೬

**೮ ನೇ ತರಗತಿ ಪ್ರಥಮ ಭಾಷೆ ಕನ್ನಡ ಅಂಕಗಳು:೪೦**

### ಭಾಗ -'ಎ'

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. ೪*೧=೪**

೧.ಅಮುಗೆ ರಾಯಮ್ಮ ಯಾರ ಮುಖ ನೋಡಲಾಗದೆಂದು ಹೇಳಿದ್ದಾಳೆ ?

೨.ಎಂತವರ ಸಂಗದಲ್ಲಿರಬೇಕು ?

೩.ರಾವಣ ವಟುವನ್ನು ಏಕೆ ಕರೆದನು ?

೪. ರಾವಣನಿಂದ ಶಿವನಿಗೆ ದೊರಕಿದ ಅಭಯ ವಚನವೇನು ?

**ಈ ಕೆಳಗಿನ ಪ್ರಶ್ನೆಗಳಿಗೆ ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. ೪*೨=೮**

೫. ರಾಜನ ಮಗಳು ಗಂಡು ವೇಷವನ್ನು ಹಾಕಿಕೊಂಡು ಏನು ಮಾಡಿದಳು ?

೬.ಆಯ್ದುಕ್ಕಿ ಮಾರಯ್ಯ ಅವರು ಕಾಯಕದ ಮಹತ್ವವನ್ನು ಹೇಗೆ ನಿರೂಪಿಸಿದ್ದಾರೆ ?

೭.ಯಾವ ವಸ್ತುಗಳ ಬಳಕೆಯಲ್ಲಿ ಅವುಗಳ ಕುಲ ನೋಡುವುದಿಲ್ಲ ?

೮.ಭಾರತೀಯ ಸಂಸ್ಕೃತಿಯ ಹೆಚ್ಚುಗಾರಿಕೆಗೆ ಭೌಗೋಳಿಕ ಸನ್ನಿವೇಶ ಹೇಗೆ ಕಾರಣವಾಗಿದೆ ?

**ಈ ಕೆಳಗಿನ ಹೇಳಿಕೆಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. ೧*೩=೩**

೯. ''ಲಲಾಟದ ಮಾರ್ಗವಾಗಿ ಭ್ರೂ ಮಧ್ಯೆ ಇಳಿದು ಕಮಲನಯಗಳನ್ನು ಪ್ರವೇಶಿಸಿ ಬಿಟ್ಟಿತು ''

**೧೦.ಮುದ್ದಣ ಕವಿಯ ಸ್ಥಳ ,ಕಾಲ,ಕೃತಿ ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. ೧*೨=೨**

**೧೧.ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ. ೧*೩=೩**

ಅಂಬುಜಾನನೆ --------------------------- ಅಥವಾ ಮಾತಾ ಪಿತರನು -------------
------------------------------- - ------------------------------
--------------------------------- --------------------------
-------------------------------------- ------------------ಫಲ ?
--------------------------------------
----------------------------------ಜೀವನವ

**೧೨. ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು , ಅಡಕವಾಗಿರುವ ಮೌಲ್ಯವನ್ನಾಧರಿಸಿ ಪದ್ಯದ ಸಾರಾಂಶವನ್ನು ಸಂಕ್ಷಿಪ್ತವಾಗಿ ೩-೪ ವಾಕ್ಯಗಳಲ್ಲಿ ಬರೆಯಿರಿ. ೧*೩=೩**

ಗುರುಗಳಿಗೆ ಹಿರಿಯರಿಗೆ |ಶಿರಬಾಗಿ ಎರಗಿದರೆ
ನರಸುರರು ಒಲಿದು ಸಿರಿಸುರಿದು ಕೈಲಾಸ |
ಕರತಲಾಮಲಕ ಸರ್ವಜ್ಞ.

mamatabhagwat1@gmail.com

**೧೩. ಈ ಕೆಳಗಿನ ಪ್ರಶ್ನೆಗಳಿಗೆ ಆರು ಅಥವಾ ಎಂಟು ವಾಕ್ಯಗಳಲ್ಲಿ ಉತ್ತರ ಬರೆಯಿರಿ. ೧*೩ =೩**

ಕಂಸ ದೇವಕಿಯಿಂದ ಕೃಷ್ಣನ ಬಗ್ಗೆ ತಿಳಿಯಲು ಹೋಗಿ ನಿರಾಶನಾದದ್ದು ಹೇಗೆ ?ತಿಳಿಸಿ.

ಅಥವಾ

ಕಂಸನು ತನ್ನ ಮಾನಸಿಕ ತಳಮಳವನ್ನು ವಸುದೇವನಲ್ಲಿ ಹೇಗೆ ತೋಡಿಕೊಂಡಿದ್ದಾನೆ ? ವಿವರಿಸಿ.

**೧೪. ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು ,ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. ೨*೧=೨**

ತಮ್ಮ Ignited Minds ಪುಸ್ತಕದ ಪ್ರಾರಂಭದಲ್ಲಿ ಡಾ|| ಕಲಾಂ ಬರೆದಿರುವ ಶಬ್ದಗಳಿವು .

''ಕನಸು ಕಾಣಿರಿ ,ಕನಸುಕಾಣಿರಿ ,ಕನಸು ಕಾಣಿರಿ

ಕನಸುಗಳು ವಿಚಾರಗಳಾಗಿ ಮಾರ್ಪಡುತ್ತವೆ.

ಮತ್ತು ವಿಚಾರಗಳು ಕ್ರಿಯೆಗಳಾಗಿ ರೂಪುಗೊಳ್ಳುತ್ತವೆ''

ಕನಸುಗಳ ಬಗ್ಗೆ ಹೇಳುವಾಗ ,ಯುವಕರು ತಮ್ಮ ಮುಂದೆ ಒಂದು ಗುರಿಯನ್ನು ಹೊಂದಿರಬೇಕೆಂದು ಡಾ|| ಕಲಾಂ ಹೇಳುತ್ತಾರೆ. ಗುರಿಯಿಲ್ಲದವ ಅಲ್ಲಿ ಇಲ್ಲಿ ಗೊತ್ತು ಗುರಿಯಿಲ್ಲದೆ ಅಲೆದಾಡುತ್ತಾನೆ.ನಾವು ಏನನ್ನು ಗಟ್ಟಿಯಾಗಿ ನಂಬಿದರೆ ಹಾಗೂ ಆ ದಿಕ್ಕಿನಲ್ಲಿ ದಿಟ್ಟ ಪ್ರಯತ್ನವನ್ನು ಮಾಡಿದರೆ ,ಆಗ ನಾವು ನಮ್ಮ ಕನಸುಗಳನ್ನು ನನಸಾಗಿಸಬಹುದು. ಅಮೆರಿಕಾದ ದೊಡ್ಡ ಸಂತರಾದ Ralph Waldo Emerson ಸ್ವ ಭರವಸೆಯ ಮೇಲೆ ಬರೆದಿರುವ ತಮ್ಮ ಪ್ರಬಂಧದಲ್ಲಿ ಹೇಳಿರುವ ''ನಿಮ್ಮಲ್ಲಿ ಭರವಸೆಯಿಡಿ'' ಎಂಬ ಹೇಳಿಕೆಗಳನ್ನೇ ಡಾ|| ಕಲಾಂ ಪ್ರತಿಧ್ವನಿಸುತ್ತಾರೆ.

ಪ್ರಶ್ನೆಗಳು :

೧.ಕಲಾಂರವರು ತಮ್ಮ Ignited Minds ಪುಸ್ತಕದಲ್ಲಿ ಕನಸು ಕಾಣುವ ಕುರಿತು ಏನು ಹೇಳಿದ್ದಾರೆ ?

೨.ಕನಸುಗಳನ್ನು ನನಸಾಗಿಸುವ ಕುರಿತು ಕಲಾಂ ಏನು ಹೇಳಿದ್ದಾರೆ ?

## ಭಾಗ – 'ಬಿ'

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ.ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ,ಉತ್ತರಕ್ಕಾಗಿಯೇ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ. ೩*೧=೩**

೧೫.'ಅವನ ಕಣ್ಣುಗಳು ಉರಿಯತೊಡಗಿದವು ' ಈ ವಾಕ್ಯವು ವಾಕ್ಯದ ಈ ಪ್ರಕಾರಕ್ಕೆ ಉದಾಹರಣೆಯಾಗಿದೆ.

ಎ) ಸಂಯೋಜಿತ ವಾಕ್ಯ ಬಿ)ಸಾಮಾನ್ಯ ವಾಕ್ಯ ಸಿ)ನಿಷೇಧಾರ್ಥಕ ವಾಕ್ಯ ಡಿ)ಮಿಶ್ರ ವಾಕ್ಯ

೧೬.ಮೂಜಗ ಪದವು ಈ ಸಮಾಸದ ಉದಾಹರಣೆಯಾಗಿದೆ.

ಎ)ತತ್ಪುರುಷ ಸಮಾಸ ಬಿ)ದ್ವಂದ್ವ ಸಮಾಸ ಸಿ)ದ್ವಿಗು ಸಮಾಸ

೧೭.''ಅಜ್ಞಾನಿಯೊಡನಾಟ ಕಲ್ಲು ಹಾದಂತೆ'' ಈ ವಾಕ್ಯದಲ್ಲಿರುವ ಅಲಂಕಾರ –

ಎ)ರೂಪಕ ಬಿ)ಯಮಕ ಸಿ)ಉತ್ಪ್ರೇಕ್ಷೆ ಡಿ)ಉಪಮಾ

mamatabhagwat1@gmail.com

**ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ. ೨*೧=೨**

೧೮. ಹಲವು:ಪರಿಮಾಣವಾಚಕ:: ತೆಂಕಣ : ---

೧೯. ನಾವು : ಉತ್ತಮ ಪುರುಷ ಸರ್ವನಾಮ : : ತಾವು : ----

**೨೦. .ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ,ಗಣವಿಭಾಗ ಮಾಡಿ,ಛಂದಸ್ಸಿನ ಹೆಸರು ಬರೆಯಿರಿ. ೧*೨=೨**

ಅಳಿದ ಮಗನೋಪಾದಿ ನಿಮ್ಮನು
ಸಲಹುವೆನು ನಂಬುವುದು ನೀವೆನ
ಲಲಸಿ ಬಳಿಕಸುವಿಡಿಯಲೊಲ್ಲದೆ ಸುತ ವಿಯೋಗದಲಿ

ಅಥವಾ

ಕಾವೇರಿಯಿಂದಮಾ ಗೋ
ದಾವರಿವರಮಿರ್ದ ನಾಡದಾ ಕನ್ನಡದೊಳ್

## ಭಾಗ -'ಸಿ'

**೨೧. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ. ೧*೨=೨**

* ಆಳಾಗಿ ದುಡಿ ;ಅರಸಾಗಿ ಉಣ್ಣು.
* ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು
* ಹಾಸಿಗೆ ಇದ್ದಷ್ಟು ಕಾಲು ಚಾಚು

**೨೨. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ೬ ರಿಂದ ೮ ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಸಂಕ್ಷಿಪ್ತ ಪ್ರಬಂಧ ಬರೆಯಿರಿ. ೧*೩ =೩**

* ಮಕ್ಕಳ ಹಕ್ಕುಗಳು
* ಗ್ರಂಥಾಲಯದ ಪ್ರಯೋಜನಗಳು
* ಆಟಗಳ ಮಹತ್ವ

*********************** ಕಾಯಕವೇ ಕೈಲಾಸ ***************************

mamatabhagwat1@gmail.com